## <u>1 ನೇ ಅಪರ ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು</u>

| | | |
|---|---|---|
| ಸಾಕ್ಷಿಯ ಹೆಸರು | :- | ನವೀನ್ |
| ತಂದೆ/ ಗಂಡನ ಹೆಸರು | :- | ಪುಟ್ಟಸ್ವಾಮಿ |
| ವಯಸ್ಸು | :- | 27 ವರ್ಷ |
| ಉದ್ಯೋಗ | :- | ವ್ಯವಸಾಯ |
| ವಾಸಸ್ಥಳ | :- | ಅಣ್ಣೆದೊಡ್ಡಿ |

(ಸಾಕ್ಷಿಗೆ ದಿನಾಂಕಃ 09-10-2024 ರಂದು ಪ್ರಮಾಣ ವಚನ ಬೋಧಿಸಲಾಯಿತು)

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ</u>

ಚಾಸಾ- 2 ನನ್ನ ಅಣ್ಣ . ಚಾಸಾ- 3 ರಿಂದ 7 ನಮ್ಮ ಊರಿನವರು. ಆರೋಪಿ ನಮ್ಮ ಊರಿನವರಾಗಿರುತ್ತಾರೆ. ದಿಃ27-01-2023 ರಂದು ರಾತ್ರಿ 8.00 ಗಂಟೆಗೆ ನಮ್ಮ ಊರಿನಲ್ಲಿ ಆರೋಪಿಯ ಮನೆಯ ಪಕ್ಕ ಹಳೇ ದ್ವೇಷದಿಂದ ಚಾಸಾ- 2 ರವರು ಚಾಸಾ- 5 ರೊಂಾದಿಗೆ ಮಾತನಾಡುತ್ತಾ ನಿಂತಿದ್ದಾಗ ಆರೋಪಿಯು ಪೈಪ್ ರಾಡ್ ನಿಂದ ಚಾಸಾ- 2 ರವರಿಗೆ ತಲೆಯ ಮೇಲೆ ಮತ್ತು ಭುಜದ ಮೇಲೆ ಹಲ್ಲೆ ಮಾಡಿರುತ್ತಾರೆ ,ಕಾಲಿನಿಂದ ಒದ್ದು ಸಾಯಿಸುವುದಾಗಿ ಕೊಲೆ ಬೆದರಿಕೆ ಹಾಕಿರುತ್ತಾರೆ. ನಂತರ ಚಾಸಾ- 3 ಮತ್ತು 4 ರವರು ಚಾಸಾ- 2 ರವರು ಆಸ್ಪತ್ರೆಗೆ ಸೇರಿಸಿದ್ದು ನಂತರ ನಾನು ಕೊಪ್ಪ ಆಸ್ಪತ್ರೆಗೆ ಹೋಗಿರುತ್ತೇನೆ. ನಂತರ ಆಂಬುಲೆನ್ಸ್ ಮುಲಾಕ ಕೆರೆದುಕೊಂಡು ಚಿಕಿತ್ಸೆ ಕೊಡಿಸಿದ್ದೇನೆ. ನಂತರ ಮರುದಿನ ದೂರು ದಾಖಲಿಸಿದ್ದೇಃನೆ. ಸಾಕ್ಷಿಯು ದೂರು ನೋಡಿ ಗುರುತಿಸಿದ್ದು ನಿಪಿ- 1 ಎಂದು ಸಾಕ್ಷಿಯ ಸಹಿಯನ್ನು ನಿಪಿ- 1 ಎ ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಶ್ರೀ ವಕೀಲರವರಿಂದ</u>**

ಚಾಸಾ- 3 ಮತ್ತು 4 ರವರು ನನ್ನ ದಾಯಾದಿ ಸಂಬಂಧಿಕರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಮ್ಮ ಊರಿನವರು ಎನ್ನುತ್ತಾರೆ . ಯಾವ ಹಳೇ ದ್ವೇಷ ಇತ್ತು ಎಂದು ನನಗೆ

ಗೊತ್ತಿಲ್ಲ ಆದರೆ ಸದರಿ ದ್ವೇಷದಿಂದ ಸಾಯಿಸುತ್ತಿರುವುದಾಗಿ ಹೇಳಿದ್ದರು ಎನ್ನುತ್ತಾರ್ಲೆ ಆರೋಪಿ ಸೊಸೈಟಿಯಲ್ಲಿ ಅಧ್ಯಕ್ಷರಾಗಿದ್ದರು ಎಂದರೆ ಸರಿ ಚಾಸಾ- 7 ರವರು ಕೂಡ ಚುನಾವಣೆಗೆ ಸ್ಪರ್ಧಿಸಿದ್ದರು ಎಂದರೆ ಸರಿ . ರಾಜಕೀಯವಾಗಿ ಚಾಸಾ- 2 ರಿಂದ 4 ರವರು ಒಂದು ಪಕ್ಷದವರಾಗಿದ್ದು ಆರೋಪಿಯವರೇ ಒಂದು ಪಕ್ಷದವರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾವು ರಾಜಕೀಯಕ್ಕೆ ಹೋಗವುದಿಲ್ಲ ಎನ್ನುತ್ತಾರೆ. ನಾನು ಗಲಾಟೆಯನ್ನು ಪ್ರತ್ಯಕ್ಷವಾಗಿ ನೋಡಿಲ್ಲ ಎಂದರೆ ಸರಿ . ಚಾಸಾ- 7 ರವರು ಕೂಡ ಒಂದುಬಾರಿ ಸೊಸೈಟಿ ಅಧ್ಯಕ್ಷರಾಗಿದ್ದರು ಎಂದರೆ ಸರಿ . ಚಿಕ್ಕಮಲ್ಲಯ್ಯ ನನ್ನ ದೊಡ್ಡಪ್ಪ ಎಂದರೆ ಸರಿ . ಸದರಿ ನನ್ನ ದೊಡ್ಡಪ್ಪನಿಗೆ ಸೊಸೈಟಿಯಲ್ಲಿ ಸಾಲ ಕೊಡಿಸುವಂತೆ ಆರೋಪಿಯೊಂದಿಗೆ ಗಲಾಟೆ ಮಾಡಿದ್ದರು ಎಂದರೆ ಸರಿಯಲ್ಲ. ಆದರೆ ಈಗಾಗಲೇ ನನ್ನ ದೊಡ್ಡಪ್ಪ ಸಾಲ ಪಡೆದಿದ್ದು ವಾಪಸ್ ಮಾಡದ ಕಾರಣ ಸಾಲ ಕೊಡಲು ಸಾಧ್ಯವಿಲ್ಲ ಎಂದು ಆರೋಪಿ ಹೇಳಿದ್ದನ್ನು ನನ್ನ ಅಣ್ಣ ದ್ವೇಷ ಸಾಧಿಸುತ್ತಿದ್ದರು ಎಂದರೆ ಸರಿಯಲ್ಲ. ಚಾಸಾ- 2 ರಿಂದ 7 ರವರು  ಆರೋಪಿಯ ವಿರುದ್ದ ಸೊಸೈಟಿ ಚುನಾವಣೆಯಲ್ಲಿ ಕೆಲಸ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಪಿಯುಸಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ನಿಪಿ- 1 ನ್ನು ಠಾಣೆಯಲ್ಲಿ ಟೈಪ್ ಮಾಡಿಸಿರುತ್ತೇನೆ. ನಾನು ದೂರು ನೀಡಲು ಹೋಗಿದ್ದಾಗ ನನ್ನೊಂದಿಗೆ ನಾಗರಾಜು ಎಂಬ ಸ್ನೇಹಿತ ಬಂದಿದ್ದರು. ಚಾಸಾ- 2 ರವರಿಗೆ ಕುಡಿಯುವ ಅಭ್ಯಾಸವಿದೆ ಎಂದರೆ ಮೊದಲು ಇತ್ತು ಎನ್ನುತ್ತಾರೆ. ನನಗೆ ಗಲಾಟೆಯಾದ ವಿಚಾರವನ್ನು ಚಾಸಾ- 4 ರವರು ಫೋನ್ ಮಾಡಿ ತಿಳಿಸಿರುತ್ತಾರೆ. ನಾನು ಸ್ಥಳಕ್ಕೆ ಹೋಗಿರಲಿಲ್ಲ ಕೊಪ್ಪ ಆಸ್ಪತ್ರೆಗೆ ಹೋಗಿದ್ದೆ. ಚಾಸಾ- 4 ರವರು ಗಲಾಟೆಯಾಗಿರುವ ವಿಚಾರವನ್ನು ನನಗೆ ಫೋನ್ ಮಾಡಿ ತಿಳಿಸಿದ್ದಾರೆ ಎಂದು ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ- 2 ರವರು ಕುಡಿದು ಬಿದ್ದು ಗಾಯ ಮಾಡಿಕೊಂಡಿದ್ದನ್ನು ದುರುಪಯೋಗಪಡಿಸಿಕೊಂಡು ನಾನು ಮತ್ತು ಚಾಸಾ- 4 ರವರು ಸೇರಿ ಸುಳ್ಳು ದೂರು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಆರೋಪಿ ಮತ್ತು ಚಾಸಾ- 2 ರವರ ನಡುವೆ ಯಾವುದೇ

ಗಲಾಟೆಯಾಗಿಲ್ಲದಿದ್ದರೂ ಚಾಸಾ- 3 ಮತ್ತು 4 ರವರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಚಾಸಾ- 2 ರವರನ್ನು ನೋಡಲು ಆಸ್ಪತ್ರೆಗೆ ಹೋಗಿದ್ದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ- 2 ರವರು ಸ್ಕೂಟರ್ ನಿಂದ ಬಿದ್ದು ಗಾಯ ಮಾಡಿಕೊಂಡಿದ್ದರೂ ಆರೋಪಿಯ ವಿರುದ್ಧ ಸುಳ್ಳು ದೂರು ದಾಖಲಿಸಿದ್ದೀರ ಎಂದರೆ ಸರಿಯಲ್ಲ. ಆರೋಪಿಯು ಚಾಸಾ- 2 ರವರಿಗೆ ಪೈಪ್ ರಾಡ್ ನಿಂದ ಹಲ್ಲೆ ಮಾಡಿದ್ದಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿ ಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

(ಶ್ರೀಮತಿ ನಳಿನ ಎಸ್.ಸಿ.)
1 ನೇ ಅಪರ ಸಿವಿಲ್ ನ್ಯಾಯಾಧೀಶರು,
ಮದ್ದೂರು